3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 4

ಚಾಸಾ 4

| | |
|---|---|
| ಹೆಸರು | ರಾಮಕೃಷ್ಣ |
| ತಂದೆಯ ಹೆಸರು | ನರಸಿಂಹಮೂರ್ತಿ |
| ವಯಸ್ಸು | 25 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಗೂಲಹಳ್ಳಿ |

ಸಾಕ್ಷಿಯನ್ನು ದಿನಾಂಕ 27.08.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು ಆದಿಕರ್ನಾಟಕ ಜಾತಿಗೆ ಸೇರಿರುತ್ತೇನೆ. ಆರೋಪಿತರು ನಮ್ಮ ಗ್ರಾಮದವರು.1 ನೇ ಆರೋಪಿ ನಾಯಕ ಜನಾಂಗಕ್ಕೆ ಸೇರಿರುತ್ತಾರೆ. 2 ಮತ್ತು 3 ನೇ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿರುತ್ತಾರೆ. ಮೃತ ಸಂಜೀವರಾಯಪ್ಪ ರವರು ಗೊತ್ತು. ಮೃತ ಸಂಜೀವರಾಯಪ್ಪ ಚಾಸಾ.1 ರವರ ಮಗ.

2) ಸಂಜೀವರಾಯಪ್ಪರವರು ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾನೆ. ಅವರು ಕೂಲಿ ಕೆಲಸ ಮಾಡುತ್ತಿದ್ದರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಪಿ.2 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಿಡಿಗೇಶಿ ಪೋ.ಠಾಣೆಯಲ್ಲಿ ಮಾಡಿರುತ್ತೇನೆ.

ಚಾಸಾ.1 ರವರೊಂದಿಗೆ ಪೋ.ಠಾಣೆಗೆ ಹೋದಾಗ ಸದರಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

3) ದಿನಾಂಕ 29.11.2019 ಕ್ಕಿಂತ 20 ದಿನಗಳ ಹಿಂದೆ ನಮ್ಮ ಊರಿನ ಅಶ್ವತ ಕಟ್ಟೆಯ ಬಳಿ ಕುಳಿತಿದ್ದಾಗ ಸಂಜೀವರಾಯಪ್ಪ ರವರು ಅಂಗಡಿ ಕಡೆಯಿಂದ ಬರುತ್ತಿದ್ದು ಆಗ 1 ನೇ ಆರೋಪಿಯ ಹೆಂಡತಿ ನಡೆದುಕೊಂಡು ಹೋಗುತ್ತಿದ್ದಳು ಎಂದರೆ ಸರಿಯಲ್ಲ. ಸಂಜೀವರಾಯಪ್ಪನು ಮಾತನಾಡಿದನೋ ಏನೋ ನನಗೆ ಕೇಳಿಸಲಿಲ್ಲ, ಆದರೆ 1 ನೇ ಆರೋಪಿಯ ಹೆಂಡತಿ ಸಂಜೀವರಾಯಪ್ಪನನ್ನು ಬೈದುಕೊಂಡು ಹೋದಳು ಎಂದರೆ ಸರಿಯಲ್ಲ. ಬಳಿಕ ಈ ವಿಚಾರವನ್ನು 1 ನೇ ಆರೋಪಿಯ ಹೆಂಡತಿ ತನ್ನ ಗಂಡನಿಗೆ ಏನೋ ಹೇಳಿದಳೋ ಏನೋ, ಆಗ 1 ಮತ್ತು 2 ನೇ ಆರೋಪಿಗಳು ಇಬ್ಬರೂ ಸೇರಿ ದಿಃ 17.11.2019 ರಂದು ರಾತ್ರಿ 8 ಗಂಟೆಗೆ ನಮ್ಮ ಊರಿನ ಅಶ್ವತಕಟ್ಟೆಯ ಬಳಿ ಸಂಜೀವರಾಯಪ್ಪನ ಮೇಲೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ನನ್ನ ಮಗನೇ ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ನಿನ್ನನ್ನು ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದಳು, ಆಗ ಅಲ್ಲಿಯೇ ಇದ್ದ ನಾನು ಸಮಾಧಾನ ಮಾಡಿ ಸಂಜೀವರಾಯಪ್ಪನನ್ನು ಬಿಡಿಸಿಕೊಂಡೆನು ಎಂದರೆ ಸರಿಯಲ್ಲ.

4) ಇಷ್ಟಕ್ಕೂ ಸುಮ್ಮನಾಗದೇ 1 ಮತ್ತು 2 ನೇ ಆರೋಪಿತರು ದಿಃ18.11.19 ರಂದು ಬೆಳಿಗ್ಗೆ 10 ಗಂಟೆಗೆ ಪುನಃ ಸಂಜೀವರಾಯಪ್ಪರವರ ಮನೆಯ ಬಳಿ ಹೋಗಿ ಮನೆಯ ಬಳಿ ಇದ್ದ ಸಂಜೀವರಾಯಪ್ಪರವರ ಮೇಲೆ ಗಲಾಟೆ ಮಾಡಿ ಬೈದು ಕೈಗಳಿಂದ ಹೊಡೆದು ನನ್ನ ಮಗನೇ ನೀನು ಸತ್ತಾದರೂ ಸಾಯಿ, ಊರಿನಲ್ಲಿ ಏಕಿದ್ದೀಯಾ ಎಂದು ಕಿರುಕುಳ ನೀಡಿದ್ದರಂತೆ , ಆದ್ದರಿಂದ ಸಂಜೀವರಾಯಪ್ಪರವರು 1 ಮತ್ತು 2 ನೇ ಆರೋಪಿತರ ಪ್ರಚೋದನೆಯಿಂದ ದಿಃ 18.11.2019 ರಂದು ತನ್ನ ಮನೆಯಲ್ಲಿ ಯಾರೂ ಇಲ್ಲದೇ ಇದ್ದಾಗ ಬೆಳಿಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ತನ್ನ ಮನೆಯ ರೂಮಿನಲ್ಲಿ ಮೇಲ್ಚಾವಣಿಯ ಶೀಟಿಗೆ ಅಡ್ಡಲಾಗಿ ಹಾಕಿದ್ದ ಕಬ್ಬಿಣದ ಪೈಪಿಗೆ ವೇಲ್ ಬಟ್ಟೆಯಿಂದ ನೇಣು ಬಿಗಿದುಕೊಂಡು ಮೃತಪಟ್ಟಿರುತ್ತಾನೆ, ಅಲ್ಲದೇ ಸಂಜೀವರಾಯಪ್ಪನು ತನ್ನ ಮರಣ ಕಾಲಕ್ಕೆ ಚೀಟಿಯನ್ನು ಬರೆದಿಟ್ಟಿದ್ದು ಅದರಲ್ಲಿ ತನ್ನ ಸಾವಿಗೆ 1 ಮತ್ತು 2 ನೇ ಆರೋಪಿಗಳೇ ಕಾರಣ ಎಂದು ಬರೆದಿಟ್ಟಿದ್ದನಂತೆ , ಹಾಗೂ ಸ್ಥಳದಲ್ಲಿ ಸಿಕ್ಕ ಚೀಟಿಯನ್ನು 3 ನೇ ಆರೋಪಿ ಓದಿದ ಬಳಿಕ ಯಾರಿಗೂ ಗೊತ್ತಾಗದೇ ಇರಲಿ ಎಂದು ಚೀಟಿಯನ್ನು ಹರಿದು ಚೂರು ಚೂರು ಮಾಡಿದನಂತೆ ಎಂದು ಈಗ ನನಗೆ ಓದಿ ಹೇಳಿದ ನಿಪಿ.5 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 18.11.19 ರಂದು ಸಂಜೆ 6.45 ರಿಂದ 7.45 ಗಂಟೆಯವರೆಗೆ ಚಾಸಾ.1 ರವರ ಮನೆಯಲ್ಲಿ ಸಂಜೀವರಾಯಪ್ಪ ನೇಣು ಬಿಡಿದುಕೊಂಡಿದ್ದ ಜಾಗದಲ್ಲಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ವಿವರವಾಗಿ ಪೊಲೀಸರು ಸ್ಥಳ ಪಂಚನಾಮೆಯನ್ನು ನಿಪಿ.2 ರಂತೆ ಮಾಡಿಕೊಂಡಿದ್ದು ಸ್ಥಳದಲ್ಲಿಯೇ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಕಬ್ಬಿಣದ ಪೈಪಿನಲ್ಲಿ ಉಳಿದುಕೊಂಡಿದ್ದ ವೇಲ್ ಬಟ್ಟೆಯ ತುಂಡನ್ನು ಬಿಚ್ಚಿಸಿ, ಪೊಲೀಸರು ಅದನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಸ್ಥಳದಲ್ಲಿ ಹಾಜರಿದ್ದ ಚಾಸಾ.1 ರವರು 3 ನೇ ಆರೋಪಿ ಮೃತನು ತನ್ನ ಮರಣದ ಕಾರಣ ಬರೆದುಕೊಂಡು ಕಾಲಿನ ಹತ್ತಿರ ಇಟ್ಟುಕೊಂಡಿದ್ದ ಚೀಟಿಯನ್ನು ಹರಿದು ಹಾಕಿದ ತುಂಡುಗಳು ಇವೇ ಎಂದು ಹೇಳಿ

ಹಾಜರುಪಡಿಸಿದ್ದು ಅವುಗಳನ್ನು A-4 ಸೈಜಿನ ಹಾಳೆಗೆ ಅಂಟಿಸಿ ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂರದೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ : ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ